Previous references.
... 455-09 (22, 25, 29, 30) 1913
(Municipal

Later references.

File No. 69-13
Serial Nos. 23 & 27

Preserve

GENERAL AND REVENUE SECRETARIAT.

Serial Nos. 23 & 27

Part B. for November 1913

SUBJECT

Rules & Bye-laws under the Nyporo municipal Regulation

(23) From the Dy. Comm^r, Chittagong, no 1924/10-11-13
States that the Dewanpare mul. Cl have resolved to adopt the rules sanctioned for the Chittagong & Hathazari & that the alterations to the rules proposed by them previously, for the conduct of business at mul. Cls. are unnecessary

(27) To the Dy. Comm^r Chittagong &c, no S-6010/24-11-13.
Sanctions the rules for the conduct of business of the Dewanpare mul. Cl.

G. R. S. 58

GPB—4,000—4-7-11

Withdrawing
no 2-13

G.R.S. 11] 1913. 2770

GENERAL AND REVENUE SECRETARIAT.

(Mund)

NOTES.

File No 69/13

FILE HEADING.

Rules and Bye-laws under the Tuticorin Municipal Regulation

From

The Deputy Commissioner, Chetalroog District.

No. 192 Dated 10 11 1913 Received 11 11 1913

Diary No 2770	Enclos 1	Spare Copies	Serial No 23

BRIEF ABSTRACT OF LETTER.

Referring to para 2 of G.O. No 7826 Mul 458 09-30 d, the 1st April 1913, states that, on further consideration, the Davangere Mun Cl have resolved that the alterations to the Rules for the conduct of business at Mun Cls proposed by them previously are unnecessary and that the rules sanctioned for Chetalroog & Harihar will be adopted by them, and requests sanction for the resolution of the Mun Cl.

NOTES AND ORDERS

Draft order is submitted.

AKK 70

13-11-1913 2 Dr Sec'y. 3 The rules may be approved

14 2nd Councillor

Asst 14/11

Dewan 15/11

4 Draft approved by the 2nd Cl

Dewan 17/11

16/11/13

5 Issue

Sgdh 17/4

NOTES—First Sheet.

GPB—35,000- 15 6 12

G. R. S. 12]

General and Revenue Secretariat

Ml File No 69 of 1913

Serial No.	
27	To the Resident Bhutaldooar Dept No 5601 dy 24. 11 1913 Sanctions the Rules for the Conduct of business of the Darrangere Mahal.

NOTE—Contn sheet

GPB—5,000 -26 6 11

458-9
22, 25, 29, 30

191

From The Dep & Com'l Chadwick Wood Dr

To The Sec. L to Govt Genl & Rev. Dept Bangalore

Dated

Despatched 10 Nov 13

Received

General No. 192

No.

Enclosure No 1

Requesting sanction to the proposal of the Deputy Secretary to adopt the rules of conduct for business at the Chadwick Wood Yard

No. 192 Encl 1

Office of the Deputy Commissioner,
Chitaldrug District.

D 2VVC

Dated Chitaldrug, 10th November 1913.

From

V. R. Thyagaraja Iyer Esquire M.A.,
Deputy Commissioner,
C h i t a l d r u g.

To

Encl 69-13
9123

K. R. Srinivasiengar Esquire M.A.,
Secretary to the Government of
H. H. the Maharaja of Mysore,
Genl: and Rev: Departments,
B a n g a l o r e.

S I R,

Adverting to para 2 of Government order No.7828/Ml. 458-09-30 dated 1st April 1913, I have the honor to state that the municipal council of Davangere was asked to show the necessity for the alterations in the rules relating to conduct of business at the time of meetings. On further consideration they are now of opinion that the alterations proposed by them previously are unnecessary and request that they may be permitted to adopt the rules of the Chitaldrug and Harihar Municipal councils. A copy of the resolution of the council in the matter is submitted herewith.

2. I request that the proposal of the council may kindly be sanctioned.

I have the honor to be,
S I R,
Your most obedient servant,

Deputy Commissioner,
Chitaldrug District.

S.V.

Cabinet 69-ಫಸಲಿ 23. 2

1913ನೆ ನಿಲ್ಲು ಲಿ ದಿನಾಂಕದಲ್ಲಿ, ಸಹಕಾರಿ ಶಾಖೆಯ ಕಛೇರಿಯಲ್ಲಿ - ಶ್ರೀ ಆಜಿವಿ-
ದಿಂದ ಪ್ರಾರಂಭವಾಗಿ ಬಿಡಿಸಿದ ಕಾರ್ಯಕ್ರಮಗಳ ಮೇರೆಗೆ ಕೆಳಗಿನ ಸಭೆಯು ಸೇರಿತು.

President :- R. Nanesamy Rao. Asst. Commissioner. } Present.

Vice President. :- Mr. K. Vedantiengar. Asst. Comr. } Present.

Ex-officio members.

Present.
Sub Registrar.

Absent.
Medical officer,
P. W. Sub Div. officer.

Non-official Members.

1 ಶ್ರೀಮತಿ ವಿಲಿ ವಕ್ಕಲಿಗರವರು
2. " ಕೆ. ಬಿ. ಪೈಗಳವರು
3. " ಡಿ. ಸೆಲ್ವರಾಜಯ್ಯನವರು
4. " ಕಲಿಕೋಟೆ ಮುದಲಿಯಾರ್‌ರವರು
5. " ಕಲ್ಲ ಕಲಿಂಗಪ್ಪ ರಪ್ಪನವರು
6 " ಪಿ. ಎಲ್ಲಪ್ಪ ನಪ್ಪಿನವರು
7. " ಜೆ. ವೆಂಕಾರಪ್ಪನವರು.

1. ಮಾನ್ಯ ಶ್ರೀ. ಶಿವಲಿಂಗಯ್ಯನವರು
2. " ಎಂ. ಪುಟ್ಟಸ್ವಾಮಿಗೌಡರು
3 " ಜಿ. ಕೆ. ಶಂ

X X X X X

X. Conduct of Business: ವಿಚಾರಣೆಯಲ್ಲಿ-
ಕ್ಕಿಸಲ್ಪಡುವ ವಿಷಯವಿಂದು - ಶಂಕರಪ್ಪನವರಿಗೆ
ಕ್ಕಾಗಿ ಸಕ್ಕರೆ ಕೊಳ್ಳಿಸುವಂಥಾ - ಕ್ಕೆ ಹಂಪಯ್ಯ
ಪುಟ್ಟಿಯವರಿಗೆ ಸಂಬಂಧಿಸಿದ್ದು, ಇದಕ್ಕೆ ಸಂಬಂಧ
ಪಟ್ಟ - ಲೆಕ್ಕಪತ್ರ ಪುಸ್ತಕಗಳನ್ನು ಪರಿಶೀಲನೆಗಾಗಿ
ಕೊಡಿಸಲು - ತೀರ್ಮಾನಿಸಿದೆ. 4826
Rule 458-07-30

1.4.13 ರಿಂದ ಆಯವ್ಯಯ ಕಾಲದ - ಎಂಟನೆ ಬಂದೆಗಾಗಿ
ಪಟ್ಟಿಯ ಪ್ರತಿಯೊಂದು ಕೆಲಸಕ್ಕೂ ಸಂಬಂಧಿಸಿದ
ಶೇ. - 1514 / 8.5.13 ರಿಂದ ಅಂಗೀಕರಿಸಿದೆ.

ಇದಕ್ಕೆ ಮುಂಚೆ ಸಭೆಯು ಕೂಡಿದಾಗ ಕಾರ್ಯಕ್ರಮದಲ್ಲಿ ಸೇರಿಸಿದ್ದ ವಿಷಯಗಳಲ್ಲಿ ಯಾವುದೂ ಇಲ್ಲದಿರುವುದರಿಂದ ಸಭೆಯನ್ನು ಮುಕ್ತಾಯಗೊಳಿಸಲು ಅಧ್ಯಕ್ಷರು ಸೂಚಿಸಿದರು. ಅದರಂತೆ ಸಭೆಯು ಮುಕ್ತಾಯವಾಯಿತು.

ಸಹಿ. R. Nanesamy Rao.
President

ನಕಲು copy?

President.

ದಿ. 19-8-13

Kr

G.R.S 28]

Rules for the Conduct of business and Procs at the meetings of the Davangere Mnl Cl.

69

File No. 13

Serial No. 27

Diary No of letter replied to 2770

Proceedings of the Government of His Highness the Maharaja of Mysore

GENERAL AND REVENUE SECRETARIAT.
(Mun[illegible])

Read—

, the 191 .

Letter No 192 dated the 10th November 1913 from the Dy Comr, Chitaldroog District, stating with reference to para 2 of G.O. No 7826 Mnl 458-09-30 dt the 1st April 1913,

Date of issue 26.11.13

Signed by Mr A.V Ramanathan

ORDER THEREON ~~No~~

that the Davangere Mnl Cl resolved at the meeting held on the 5th August 1913 that the alterations in the draft Rules relating to the Conduct of Business and Proceedings at the

over

SUBJECT

the meetings of the Mun. Council (proposed previously
by them ~~previously~~ are unnecessary, & that the rules
~~suspension~~ Sanctioned for Chitaldroog
and Harihar Mun. Cls will be
adopted by them; and requesting
that the proposal of the Municipal
Council may be Sanctioned.

Order thereon. No 5601 / MD 69-13 dt 24.11.13

The rules relating to the
Conduct of business and Proceedings
at the meetings of the Davangere
Municipal Council are Sanctioned,
with the amendments to rule 1 of the
proposed by them i.e as in the Case of Chitaldroog Mun. Council.
draft. A copy of the rules as
Sanctioned is appended.

16/11

Asst
14/11 for Secretary 16/11

13 11 1913

To

The Dy Comr, Chitaldroog Dt

with a copy of the Sanctd rule.

GPB—90,000—2-10-11

ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗುಗಳಲ್ಲಿ ನಡೆಸಬೇಕಾದ ಕೆಲಸಗಳನ್ನು ಮತ್ತು ನಡವಳಿಕೆಗಳನ್ನು ಕ್ರಮಪಡಿಸತಕ್ಕ ಬಗ್ಗೆ ವಿಧಿಸಲೋಸ್ಕರವಾದ ನಿಬಂಧನೆಗಳು.

ಮೀಟಿಂಗ್ ಮಾಡತಕ್ಕ ಸ್ಥಳ

ಫಲಾನೆ ಸ್ಥಳದಲ್ಲಿ ಮೀಟಿಂಗ್ ಸೇರಬೇಕೆಂದು ಕಾರಣಗಳನ್ನು ನಮೂದಿಸಿ ನೋಟೀಸು ಕೊಟ್ಟು ವಿನಾ ಇತರ ಸಂದರ್ಭಗಳಲ್ಲೆಲ್ಲಾ ಮ್ಯುನಿಸಿಪಲ್ ಕೌನ್ಸಿಲರುಗಳ ಮೀಟಿಂಗುಗಳು ಮ್ಯುನಿಸಿಪಲ್ ಕಛೇರಿಯಲ್ಲಿಯೇ ನಡೆಯಬೇಕು. ಪ್ರತಿ ತಿಂಗಳ ಆದ್ಯ ಸೋಮವಾರದಲ್ಲಿ ಮಧ್ಯಾಹ್ನ ಬಳಿಕ 8ಘಂಟೆ ಸಮಯದಲ್ಲಿ ಅಥವಾ ಪ್ರೆಸಿಡೆಂಟರಿಗೆ ಸೂಕ್ತ ಕಾಣುವ ಇತರ ದಿವಸ ಮತ್ತು ಕಾಲದಲ್ಲಿ ಪೂರ್ವೋಕ್ತ ಮೀಟಿಂಗುಗಳನ್ನು ನಡೆಸತಕ್ಕದ್ದು.

ಮೀಟಿಂಗ್ ಯಾ ಸಭೆ ಸೇರತಕ್ಕ ಬಗ್ಗೆ ನಿಷ್ಕರ್ಷೆಯಾದ ಸಮಯದಲ್ಲಿ ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಇರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ ಮೀಟಿಂಗು ನಡೆಸಬೇಕು

2 (a) ಕೌನ್ಸಿಲರುಗಳು ಮೀಟಿಂಗು ಯಾ ಸಭೆಯ ಬಗ್ಗೆ ಸೇರಬೇಕೆಂದು ನಿಷ್ಕರ್ಷೆಯಾದ ಸಮಯದಲ್ಲಿ, ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಎಷ್ಟು ಜನ ಕೌನ್ಸಿಲರುಗಳು ಹಾಜರಿರಬೇಕೆಂದು ಕ್ಲುಪ್ತವಾಗಿರುತ್ತದೆಯೋ ಅಷ್ಟು ಜನ ಹಾಜರಿದ್ದ ಪಕ್ಷದಲ್ಲಿ, ಮೀಟಿಂಗಿಗೆ ಸಂಬಂಧಪಟ್ಟ ಕಲಸವನ್ನು ಕೂಡಲೆ ಪ್ರಾರಂಭಿಸತಕ್ಕದ್ದು. ಪ್ರೆಸಿಡೆಂಟರವರು, ವೈಸ್ ಪ್ರೆಸಿಡೆಂಟರವರು ಈ ಉಭಯತ್ರರು ಗೈರ್ ಹಾಜರಾಗಿದ್ದ ಪಕ್ಷದಲ್ಲಿ, 26 (5) ನೆ ಪ್ರಕರಣದ ಮೇರೆಗೆ ಕೌನ್ಸಿಲರುಗಳು ತಮ್ಮಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಕೂಡಲೇ ಚುನಾಯಿಸಬೇಕು. ಈ ರೀತಿ ಸಭಾಧ್ಯಕ್ಷರನ್ನು ಕೌನ್ಸಿಲರುಗಳು ಚುನಾಯಿಸಿದನಂತರ ಪ್ರೆಸಿಡೆಂಟರಾಗಲಿ ವೈಸ್ ಪ್ರೆಸಿಡೆಂಟರಾಗಲಿ ಹಾಜರಾವಣ್ಣಲ್ಲಿ, ಹಾಗೆ ಚುನಾಯಿಸಲ್ಪಟ್ಟ ಕೌನ್ಸಿಲರು ಸಭಾಧ್ಯಕ್ಷರ ಸ್ಥಾನವೆನ್ನು ಬಿಟ್ಟುಕೊಡತಕ್ಕದ್ದು. ಅನಂತರ ಪ್ರೆಸಿಡೆಂಟರಾಗಲಿ ಅಥವಾ ವೈಸ್ ಪ್ರೆಸಿಡೆಂಟರಾಗಲಿ ಸಭಾಧ್ಯಕ್ಷರಾಗತಕ್ಕದ್ದು.

ಮೀಟಿಂಗ್ ಸೇರತಕ್ಕ ಬಗ್ಗೆ ನಿಷ್ಕರ್ಷೆಯಾದ ಸಮಯದಲ್ಲಿ, ಕನಿಷ್ಠ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲದೆ ಹೋದರೆ

(b) ಮೀಟಿಂಗ್ ಯಾ ಸಭೆ ಸೇರತಕ್ಕ ಬಗ್ಗೆ ಗೊತ್ತಾದ ಸಮೆಯದಲ್ಲಿ ಕಾರ್ಯನಿರ್ವಾಹದ ಬಗ್ಗೆ ಕನಿಷ್ಠ ಪಕ್ಷ ಗೊತ್ತಾದಷ್ಟು ಜನ ಕೌನ್ಸಿಲರುಗಳು ಬಾರದೆ ಇದ್ದ ಪಕ್ಷದಲ್ಲಿ, ಸಭಾಧ್ಯಕ್ಷರಾದವರು ಸದರಿ ಸಭೆಯನ್ನು ಅಷ್ಟರ್ಗ ಮಾಡುವದಕ್ಕೆ ಮುಂಚೆ, 30 ನಿಮಿಷ ಕಾಲ ನಿರೀಕ್ಷಿಸಿ, ಮೀಟಿಂಗ್ ಸೇರುವದಕ್ಕೆ ಗೊತ್ತಾದ ಕಾಲದ ಆಗಾಯಿತು 30 ನಿಮಿಷದವರೆಗೂ ಕಾರ್ಯನಿರ್ವಾಹದ ಬಗ್ಗೆ ಬೇಕಾದಷ್ಟು ಜನ ಕೌನ್ಸಿಲರುಗಳು ಬಾರದೆ ಇದ್ದರೆ ಸದರಿ ಮೀಟಿಂಗ್ ಯಾ ಸಭೆಯನ್ನು ಮುಂದಿನ ವಾರದ ಅದೇ ದಿನ, ಅದೇ ಕಾಲ ಮತ್ತು ಅದೇ ಸ್ಥಳದಲ್ಲಿ ನಡೆಸಲು ಅಷ್ಟರ್ಗ ಮಾಡತಕ್ಕದ್ದು.

ಕಾರ್ಯ ಉಪಕ್ರಮವಾವ ನಂತರ ಕ್ಲುಪ್ತಸಂಖ್ಯೆಯ ಕೌನ್ಸಿಲರುಗಳು ಇಲ್ಲದೆ ಇದ್ದರೆ

(c) ಕಾರ್ಯ ಉಪಕ್ರಮವಾವ ಮೇಲೆ ಸಭಾಕಾರ್ಯನಿರ್ವಾಹಕ್ಕೆ ಕ್ಲುಪ್ತವಾವ ಸಂಖ್ಯೆಯ ಕೌನ್ಸಿಲರುಗಳು ಹಾಜರಿಲ್ಲವೆಂದು ಸಭಾಧ್ಯಕ್ಷರಿಗೆ ಕಂಡು ಬಂದರೂ, ಅಥವಾ ಅಂಥಾ ಸಂಗತಿಯನ್ನು ಸಭಾಧ್ಯಕ್ಷರ ತಿಳಿವಳಿಕೆಗೆ ಯಾವ ಕೌನ್ಸಿಲರಾದರೂ ತಂದರೂ ತಕ್ಷಣವೇ ಸಭಾಧ್ಯಕ್ಷರು ನಡೆಸುತ್ತಿದ್ದ ಕೆಲಸವನ್ನು ನಿಲ್ಲಿಸಿ, ಹಾಜರಿರುವ ಕೌನ್ಸಿಲರುಗಳನ್ನು ಎಣಿಸತಕ್ಕದ್ದು, ಮತ್ತು ಹಾಗೆ ಎಣಿಸಲ್ಪಟ್ಟ ಸಂಖ್ಯೆಯು ಕಾರ್ಯನಿರ್ವಾಹ ಬಗ್ಗೆ

ಗೊತ್ತಾದ ಸಂಖ್ಯೆಗಿಂತಲೂ ಕಮ್ಮಿಯಾಗಿದ್ದಲ್ಲಿ, ಸದರಿ ಸಭಾಧ್ಯಕ್ಷರು ಮಾಟಂಗನ್ನು ಅಡ್ಜರ್ನ್ ಮಾಡತಕ್ಕದ್ದು

ಮಿನಿಟ್ ಯಾ ಚರ್ಚಿಸಲ್ಪಟ್ಟ ವಿಷಯಗಳ ಗೋಷ್ವಾರೆಯ ತಿದ್ದುಪಾಟು.

3. ಹಾಜರಿರುವ ಯಾವ ಕೌನ್ಸಿಲರಾದರೂ, ಚರ್ಚಿಸಲ್ಪಟ್ಟ ವಿಷಯಗಳನ್ನು ತಪ್ಪಾಗಿ ಒರೆದುಕೊಂಡಿರುತ್ತೆಂದಾಗಲಿ ಅಥವಾ ಸಂಪೂರ್ಣವಾಗಿ ಒರದುಕೊಂಡು ಇರುವುದಿಲ್ಲವೆಂದಾಗಲಿ ಹೇಳಿದರೆ, ಸಭಾಧ್ಯಕ್ಷರು ಹಾಜರಿರುವ ಮೆಂಬರುಗಳ ಅಭಿಪ್ರಾಯವನ್ನು ತಿಳಿದುಕೊಂಡು ತಮಗೆ ಸರಿಯೆಂದು ತೋರುವಂಥಾ ಬದಲಾವಣೆಗಳನ್ನು ಮಾಡತಕ್ಕದ್ದು. ಹಾಗೆ ತಿದ್ದು ಪಾಟಾದ ಮಿನಿಟ್ ಯಾ ಸಂಗ್ರಹವನ್ನು ಮಂಜೂರ್ಮಾಡಿ, ಅದಕ್ಕೆ ಸಭಾಧ್ಯಕ್ಷರು ರುಜು ಹಾಕಬೇಕು.

ಚರ್ಚೆ ನಡೆಸುವಲ್ಲಿ ಅನುಸರಿಸತಕ್ಕ ಕ್ರಮ.

4. ಮಾತಾಡಬೇಕೆಂದು ಅಪೇಕ್ಷಿಸುವ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಎದ್ದು ನಿಂತುಕೊಳ್ಳಬೇಕು ಹಾಗೆ ಯಾವ ಕೌನ್ಸಿಲರು ಮೊದಲು ಎದ್ದು ನಿಂತುಕೊಳ್ಳುವರೋ ಅವರೇ ಮೊದಲು ಮಾತಾಡಬೇಕು. ಈ ವಿಷಯದಲ್ಲಿ ಏನಾದರೂ ಸಂದೇಹ ಬಂದರೆ, ಸಭಾಧ್ಯಕ್ಷರು ಫಲಾನೆಯವರೇ ಮೊದಲು ಮಾತಾಡತಕ್ಕದ್ದೆಂಬದನ್ನು ನಿರ್ಣಯಿಸಬೇಕು. ಯಾವ ಕೌನ್ಸಿಲರಾದರೂ ಮಾತಾಡುತ್ತಿದ್ದರೆ, ಅದನ್ನು ಯಾರು ಆಟಂಕಪಡಿಸಕೂಡದು , ಆದರೆ ಸಭಾಧ್ಯಕ್ಷರು ಕ್ರಮ ತಪ್ಪಿ ಮಾತನಾಡಕೂಡದೆಂದು ಹೇಳಬಹುದು, ಮತ್ತು ಯಾರಾದರೂ ಒಬ್ಬ ಕೌನ್ಸಿಲರು ಕ್ರಮ ತಪ್ಪಿ ಮಾತನಾಡಿದರೆ ಅವರನ್ನು ಕ್ರಮ ಪ್ರಕಾರ ಮಾತನಾಡುವಂತೆ ಮಾಡಬೇಕೆಂದಾಗಲಿ ಅಥವಾ ಸಭಾಕಾರ್ಯನಿರ್ವಾಹಕ್ಕೆ ಬೇಕಾದಷ್ಟು ಜನ ಕೌನ್ಸಿಲರುಗಳು ಇಲ್ಲವೆಂತಲಾಗಲಿ ಇತರ ಕೌನ್ಸಿಲರುಗಳು ತಿಳಿಸಬಹುದು.

4A. ಮಾಟಂಗಿಗೆ ಸಂಬಂಧಪಟ್ಟ ಕಾರ್ಯಗಳ ವಿಷಯದಲ್ಲಿ ಒಬ್ಬ ಕೌನ್ಸಿಲರು ಮತ್ತೊಬ್ಬ ಕೌನ್ಸಿಲರನ್ನು ಪ್ರಶ್ನೆ ಮಾಡಬೇಕಾಗಿ ಬಂದರೆ ಅಂಥಾ ಪ್ರಶ್ನೆಯನ್ನು ಸಭಾಧ್ಯಕ್ಷರ ಮುಖಾಂತರ ಕೇಳಬೇಕು

ಕ್ರಮ.

5. ಸಭಾಧ್ಯಕ್ಷರು ಸಭೆಯು ಕ್ರಮಾತಿಕ್ರಮಣವಿಲ್ಲದಂತೆ ನೋಡಿಕೊಳ್ಳಬೇಕು. ಮತ್ತು ಇಂತಿಂಥಾ ಸಂದರ್ಭದಲ್ಲಿ ಇಂತಿಂಥಾ ಕ್ರಮವನ್ನೇ ಅನುಸರಿಸಬೇಕೆಂಬುವುದನ್ನು ಅವರು ಕೂಡಲೆ ನಿರ್ಧರಿಸಬೇಕು. ಅದರ ಮೇಲೆ ಯಾವ ಚರ್ಚೆಯನ್ನು ಮಾಡುವುದಕ್ಕೂ ಅವಕಾಶಕೊಡಕೂಡದು. ಆದರೆ ಹಾಜರಿರುವ ಕೌನ್ಸಿಲರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳತಕ್ಕದ್ದು ಅವಶ್ಯಕವೆಂದು ಸಭಾಧ್ಯಕ್ಷರಿಗೆ ತೋರಿದರೆ ಅಂಥಾ ಸಂದರ್ಭದಲ್ಲಿ ಮಾತ್ರ ಚರ್ಚೆಗೆ ಅವಕಾಶ ಕೊಡಬಹುದಾಗಿರುತ್ತೆ. ಕ್ರಮವಿಂಥಾದ್ದೆಂಬ ಅಂಶದಲ್ಲಿ ಸಭಾಧ್ಯಕ್ಷರು ಮಾಡಿರುವ ತೀರ್ಮಾನದಂತೆ ನಡೆಯಲು ಸಭೆಯುವೆರು ತಿರಸ್ಕರಿಸಿದರೆ, ಆಂಥಾ ಸಭೆ ಯಾ ಮಾಟಂಗನ್ನು ಸಭಾಧ್ಯಕ್ಷರು ಮುಂದಕ್ಕೆ ಅಡ್ಜರ್ನ್ ಮಾಡಬಹುದು

ಮಾತನಾಡಕೂಡದೆಂದು ನಿಷೇಧಿಸಲ್ಪಟ್ಟ ಕೌನ್ಸಿಲರು ತಮ್ಮ ಸ್ಥಾನದಲ್ಲಿ ಕೂತುಕೊಳ್ಳಬೇಕು.

5A ಮಾತಾಡಕೂಡದೆಂದು ಸಭಾಧ್ಯಕ್ಷರಿಂದ ಹೇಳಿಸಿಕೊಂಡಂಥಾ ಕೌನ್ಸಿಲರು ಕ್ರಮದ ವಿಷಯದಲ್ಲಿ ಉಂಟಾಗಿರುವ ಸಂಕಯವು ವೈವಸ್ಥೆಯಾಗುವವರೆಗೂ ಕೂತುಕೊಳ್ಳಬೇಕು ಪರಂತು ಸಭಾಧ್ಯಕ್ಷರು ಈ ವಿಷಯವಲ್ಲಿ ಮಾತಾಡಲು ಸದರಿ ಕೌನ್ಸಿಲರಿಗೆ ಅವಕಾಶ ಕೊಡಬಹುದು ಸಭಾಧ್ಯಕ್ಷರ ತೀರ್ಮಾನದ ಮೇಲೆ ವಿವಾದಿಸಬೇಕೆಂಬ ಅಭಿಲಾಷವುಳ್ಳ ಕೌನ್ಸಿಲರು ಮುಂದಿನ ಮಾಟಂಗಿನಲ್ಲಿ ಈ ವಿಷಯದಲ್ಲಿ ಬಂದು ಸಲಹೆಯನ್ನು ತರಬಹುದು.

ಮಾಟಂಗಿಗೆ ಸಂಬಂಧಪಟ್ಟ ಯಾವುದಾದರೂ ಒಂದು ವಿಷಯವನ್ನು ಇತರ ವಿಷಯಗಳಿಗಿಂತಲೂ ಮುಂಚಿತವಾಗಿಯೇ ಚರ್ಚಿಸಬಹುದು.

6. ಮಾಡಬೇಕಾದ ಕಾರ್ಯಗಳನ್ನು ಯಾವ ಕ್ರಮದಲ್ಲಿ ನಡೆಸಬೇಕೆಂಬುವ ವಿಷಯವನ್ನಾಗಲಿ ಅಥವಾ ಮಾಟಂಗಿನಲ್ಲಿ ಚರ್ಚಿಸಬೇಕಾದ ಯಾವ ಸಲಹೆಯನ್ನು ಸದರಿ ಮಾಟಂಗಿನಲ್ಲಿ ಯಾವ ಕ್ರಮವನ್ನನುಸರಿಸಿ ಚರ್ಚಿಸಬೇಕೆಂಬುವುದನ್ನಾಗಲಿ ಸಭಾಧ್ಯಕ್ಷರು ನಿರ್ಣಯಿಸಬೇಕು. ಈ ವಿಷಯಕ್ಕೆ ಯಾವು

ದಾದರೂ ಒಂದು ಕಾರ್ಯವನ್ನಾಗಲಿ ಅಥವಾ ಯಾವುದಾದರೂ ಒಂದು ಸಲಹೆಯನ್ನಾಗಲಿ ಇತರ ಕಾರ್ಯಗಳಿಗಿಂತಲೂ ಮುಂಚಿತವಾಗಿ ಚರ್ಚಿಸಬೇಕೆಂದು ಒಬ್ಬ ಮೆಂಬರು ಸಲಹೆ ಕೊಡುವ ಪಕ್ಷದಲ್ಲಿ, ಅಂಥಾ ಸಲಹೆಯನ್ನು ಸಭಾಧ್ಯಕ್ಷರು ವೋಟಿಂಗಿನಲ್ಲಿರುವ ಮೆಂಬರುಗಳ ಅಭಿಪ್ರಾಯವನ್ನು ಕೇಳಿ, ಸದರಿ ಸಲಹೆಯು ಪರವಾಗಿ ಅಥವಾ ಅದಕ್ಕೆ ವಿರೋಧವಾಗಿ ಕೊಡಲ್ಪಡುವ ಹೆಚ್ಚು ಮೆಂಬರುಗಳ ವೋಟು ಯಾ ಸಮ್ಮತಿಗಳಂತೆ ನಡೆಯುತಕ್ಕದ್ದು.

ಒಂದೇ ವಿಷಯಕ್ಕೆ ಸಂಬಂಧಪಟ್ಟ ಅನೇಕ ಅಂಶಗಳನ್ನು ಒಟ್ಟಾಗಿ ಸೇರಿಸುವುದು.

7. ಒಂದೇ ದಿನದಲ್ಲಿ ಒಂದಕ್ಕಿಂತಲೂ ಹೆಚ್ಚು ವೋಟಿಂಗುಗಳನ್ನು ಮಾಡಿದರೆ, ಒಂದೇ ವಿಷಯಕ್ಕೆ ಸಂಬಂಧಪಟ್ಟ ಎರಡು ಅಥವಾ ಹೆಚ್ಚಿದ ಚಿಲ್ಲರೆ ಅಂಶಗಳ ಪೈಕಿ ಕೆಲವು ಒಂದು ವೋಟಿಂಗಿನಲ್ಲಿಯೂ ಮತ್ತೆ ಕೆಲವು ಅದೇ ದಿನದ ಮತ್ತೊಂದು ವೋಟಿಂಗಿನಲ್ಲಿಯೂ ಚರ್ಚಿಸಲ್ಪಡುವುದೆಂದು ಏನಾದರೂ ವೋಟಿಂಗಿನ ವಿಷಯವಾನುಕ್ರಮಣಿಕೆಯ ತಖ್ತೆಗಳಲ್ಲಿ ದಾಖಲಾಗಿದ್ದಾಗ್ಯೂ, ಅಂಥಾ ಸಂದರ್ಭದಲ್ಲಿ ಹಾಜರಾಗಿರುವ ಕೌನ್ಸಿಲರುಗಳ ಸಮ್ಮತಿಯನ್ನು ಪಡೆದು ಸಭಾಧ್ಯಕ್ಷರು ಅವುಗಳನ್ನೆಲ್ಲಾ ಒಂದೇ ವಿಷಯವಾಗಿ ಭಾವಿಸಿ ಒಂದು ವೋಟಿಂಗಿನಲ್ಲಿ ವಿಚಾರಣೆಯಲ್ಲಿಯೇ ಆಲೋಚನೆಯಿಂದ ಫೈಸಲಾಗತಕ್ಕ ಬಗ್ಗೆ ಇಟ್ಟು ಕೊಳ್ಳಬಹುದು:

ಒಂದು ಸಲಹೆಯನ್ನು ವಿಭಾಗಿಸುವುದು.

8 ಯಾವುದಾದರೂ ಒಂದು ಸಲಹೆಯಾಗಲಿ ಅಥವಾ ತಿದ್ದುಪಾಟಾಗಲಿ ಸ್ಪಷ್ಟವಾಗಿಲ್ಲದೆ ಇರೋಣದರಿಂದ, ಒಂದೇ ಸಲಹೆಯಾಗಿ ಚರ್ಚಿಸಿದ್ದಲ್ಲಿ ತೊಂದರೆಗೂ ಸಂದೇಹಕ್ಕೂ ಅವಕಾಶವಾಗುತ್ತದೆಂಬುದಾಗಿ ತಮಗೆ ತೋರಿದರೆ ಅಂಥಾ ಸಲಹೆ ಯಾ ತಿದ್ದುಪಾಟನ್ನು ಎರಡು ಅಥವಾ ಇದಕ್ಕೆ ಹೆಚ್ಚಿದ ಸಂಖ್ಯೆಯ ಸಲಹೆಗಳಾಗಿ ವಿಭಾಗಿಸುವುದಕ್ಕೆ ಸಭಾಧ್ಯಕ್ಷರು ಅಧಿಕಾರವುಳ್ಳವರಾಗಿರುತ್ತಾರೆ.

ವಿಭಾಗಿಸಲ್ಪಟ್ಟ ಒಂದು ಸಲಹೆಯು ಒಂದಾವರ್ತಿಗಿಂತಲೂ ಹೆಚ್ಚಾಗಿ ಪ್ರಸ್ತಾಪಿಸಲ್ಪಡಬೇಕಾಗಿಯೂ ಅನುಮೋದಿಸಲ್ಪಡಬೇಕಾಗಿಯೂ ಇರುವುದಿಲ್ಲ.

ಆದರೆ ಈ ನಿಬಂಧನೆಯನ್ನನುಸರಿಸಿ ಒಂದು ಸಲಹೆ ಅಥವಾ ಒಂದು ತಿದ್ದುಪಾಟು ವಿಭಾಗಿಸಲ್ಪಟ್ಟಿರೆ, ಹಾಗೆ ವಿಭಾಗಿಸಲ್ಪಟ್ಟ ಎರಡನೆ ಅಥವಾ ಅದರ ತರುವಾಯದ ಭಾಗಗಳು, ಸಭಾಧ್ಯಕ್ಷರು ಅನ್ಯಥಾ ತೀರ್ಮಾನಿಸಿದ ಪೊರ್ತು, ಪ್ರತ್ಯೇಕವಾಗಿ ಮತ್ತೊಂದಾವರ್ತಿ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡಬೇಕಾದ್ದಿಲ್ಲವು ಆದರೆ ಸಭಾಧ್ಯಕ್ಷರು ಹಾಗೆ ವಿಭಾಗಿಸಲ್ಪಟ್ಟ ಸಲಹೆಯ ಪ್ರತಿ ಒಂದು ಭಾಗವನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಒಂದಾದ ಮೇಲೆ ಮತ್ತೊಂದರ ಪ್ರಕಾರ ತೆಗೆದುಕೊಂಡು ಅವುಗಳ ವಿಷಯದಲ್ಲಿ ಕೌನ್ಸಿಲರುಗಳ ವೋಟು ಯಾ ಸಮ್ಮತಿಯನ್ನು ಕೇಳಬೇಕು.

ವೋಟಿಂಗಿನಲ್ಲಿ ಚರ್ಚೆಯಲ್ಲಿರುವ ವಿಷಯಕ್ಕೆ ಸದರಿ ಸಲಹೆಯು ಸಂಬಂಧಿಸಿದ್ದಾಗಿರಬೇಕು

9. ಮಾತಾಡಬೇಕೆಂದು ಏಳುವ ಪ್ರತಿ ಒಬ್ಬ ಕೌನ್ಸಿಲರೂ ವೋಟಿಂಗಿನಲ್ಲಿ ಚರ್ಚೆಯಾಗುತ್ತಿರುವ ವಿಷಯವನ್ನು ಕುರಿತಾಗಲಿ, ಅಥವಾ ತಾವು ಉದ್ದೇಶಿಸಿದ ತಿದ್ದುಪಾಟನ್ನು ಕುರಿತಾಗಲಿ, ಅಥವಾ ಚರ್ಚೆಯ ಕ್ರಮದ ವಿಷಯವನ್ನು ಕುರಿತಾಗಲಿ ಮಾತಾಡತಕ್ಕದ್ದು; ಮತ್ತು ತಾವಿರುವ ಸ್ಥಳದಿಂದಲೇ ಯಾವಾಗ್ಯೂ ಸಭಾಧ್ಯಕ್ಷರಿಗೆ ಹೇಳಬೇಕು ಒಂದು ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಕೌನ್ಸಿಲರು ತಾವು ಹೇಳತಕ್ಕದ್ದನ್ನು ಒಂದಾವರ್ತಿ ಹೇಳಿದ ನಂತರ ಪುನಹಾ ಅದೇ ಸಲಹೆಯ ಅಥವಾ ತಿದ್ದುಪಾಟಿನ ವಿಷಯದಲ್ಲಿ ಮಾತಾಡಕೂಡದು.

ಪರಂತು ಒಬ್ಬ ಕೌನ್ಸಿಲರು ಒಂದು ಸಲಹೆ ಅಥವಾ ಒಪ್ಪಲಾವಣೆಯನ್ನು ಸೂಚಿಸಿದ ಮೇಲೆ, ಅದೇ ವಿಷಯವಾಗಿ ಮಾತಾಡುವುದಕ್ಕೆ ಆರ್ಹರಾದ ಇತರ ಕೌನ್ಸಿಲರು ಯಾರೂ ಮಾತಾಡತಕ್ಕವರು ಇಲ್ಲವೆಂದು ಸಭಾಧ್ಯಕ್ಷರು ತಿಳಿಸಿದ ತರುವಾಯ, ಪುನಹಾ ಅದೇ ಕೌನ್ಸಿಲರು ಅದೇ ವಿಷಯದಲ್ಲಿ ಏನಾದಾಗಿ ಮಾತಾಡಲು ಅರ್ಹರಾಗಿರುತ್ತಾರೆ.

ಅಲ್ಲದೆ, ಯಾವ ಕೌನ್ಸಿಲರಾದರೂ ಒಂದು ಸಲಹೆಯನ್ನಾಗಲಿ ಅಥವಾ ತಿದ್ದುಪಾಟನ್ನಾಗಲಿ "ನಾನು ಈ ಸಲಹೆಯನ್ನು ಅಥವಾ ತಿದ್ದುಪಾಟನ್ನು

ಅನುಮೋದಿಸುತ್ತೇನೆ " ಎಂಬುದಾಗಿ ಹೇಳುವುದರ ಮೂಲಕ ಆ ರೀತಿ ಆದೇಶವನ್ನು ಅನುಮೋದಿಸಬಹುದು. ಮತ್ತು ಇದರ ವಿಚಾರವಾಗಿ ತರುವಾಯ ಮೊತನಾಡುವುದಾಗಿ ಹೇಳಬಹುದು. ಇದೂ ಅಲ್ಲದೆ ತಾವು ಆಡಿದ ಮೊತಿನಲ್ಲಿ ತೋರುವ ತಪ್ಪು ಅಭಿಪ್ರಾಯವನ್ನು ಸರಿಯಾಗಿ ವಿವರಿಸಿ ಹೇಳಲು ಆಪೇಕ್ಷಿಸುವ ಕೌನ್ಸಿಲರು ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆದು ಆರೀತಿ ಮೊಡಬಹುದು.

ವಾಡಿಕೆಯಾದ ತೀರ್ಮಾನಗಳನ್ನು ಒಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಮಿಾಟಿಂಗಿನಲ್ಲಿ ಹೇಳಬಹುದು.

10. ವಾಡಿಕೆಯಾದ ತೀರ್ಮಾನಗಳು ಎಂದರೆ ಕ್ಲುಪ್ತಕಾಲಗಳಲ್ಲಿ ತಯಾರಿಸಲ್ಪಡುವ ತಖ್ತೆಗಳನ್ನು ರಿಕಾರ್ಡು ಮಾಡುವುದು, ಅಥವಾ ಕಮ್ಮಿಟಿಗಳ ನಡವಳಿಕೆಗಳನ್ನು ಮಂಜೂರ್ಮಾಡುವುದು, ಇವುಗಳನ್ನು ಒಬ್ಬರಿಂದಲೂ ಪ್ರಸ್ತಾಪಿಸಲ್ಪಡದೆ ಅಥವಾ ಅನುಮೋದಿಸಲ್ಪಡದೆ ಸಭಾಧ್ಯಕ್ಷರು ವಿಾಟಿಂಗಿನಲ್ಲಿ ಇಡಬಹುದು. ಸಭಾಧ್ಯಕ್ಷರನ್ನು ಜುನಾಯಿಸತಕ್ಕ ವಿಷಯದಲ್ಲಿ ಮಾಡಲ್ಪಟ್ಟ ಸಲಹೆ, ಅಡ್ಜರ್ಮೆಂಟು ವೇಗೈರೆಗಳು ಅನುಮೋದಿಸಲ್ಪಡತಕ್ಕದ್ದು ; ಆದರೆ ಇವು ಬರಹ ಮೂಲಕ ಇರಬೇಕಾದ್ದಿಲ್ಲವು.

ಪ್ರತಿ ಒಂದು ಇತರ ಸಲಹೆಯೂ ಮತ್ತು ತಿದ್ದುಪಾಟೂ ಬರವಣಿಗೆಯಲ್ಲಿ ಇರಬೇಕು ಮತ್ತು ಅನುಮೋದಿಸಲ್ಪಡಬೇಕು.

ಮೇಲೆ ವಿನಾಯಿಸಲ್ಪಟ್ಟ ವೇರೆಗೆ ಅಲ್ಲದೆ ಇತರ ಸಂದರ್ಭಗಳಲ್ಲೆಲ್ಲಾ ಪ್ರತಿ ಒಂದು ಸಲಹೆಯೂ ಮತ್ತು ಪ್ರತಿ ಒಂದು ತಿದ್ದುಪಾಟೂ ಬರವಣಿಗೆಯಲ್ಲಿದ್ದು ಅನುಮೋದಿಸಲ್ಪಡಬೇಕು.

ಕಮಿಟಿಗಳ ತೀರ್ಮಾನವು ಒಬ್ಬರಿಂದ ಪ್ರಸ್ತಾಪಿಸಲ್ಪಟ್ಟು ಮತ್ತೊಬ್ಬರಿಂದ ಅನುಮೋದಿಸಲ್ಪಡತಕ್ಕದ್ದು.

ಮ್ಯಾನೇಜಿಂಗ್ ಅಥವಾ ಇತರ ಕಮ್ಮಿಟಿಯ ಒಂದು ತೀರ್ಮಾನವು ಆಂಗೀಕರಿಸತಕ್ಕ ಬಗ್ಗೆ ಜನರಲ್ ಮಿಾಟಿಂಗಿಗೆ ಕಳುಹಿಸಲ್ಪಟ್ಟಾಗ, ಆಂಥಾದ್ದರ ಆಂಗೀಕಾರವು ಸಾಧಾರಣವಾಗಿ ಕಮ್ಮಿಟಿಯ ಮೆಂಬರುಗಳಿಂದ ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು

ತಿದ್ದುಪಾಟುಗಳು,

11 ಸಲಹೆಯು ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಟ್ಟ ನಂತರ ಆದರಮೇಲೆ ತಿದ್ದುಪಾಟಿಗಾಗಿ ಒಬ್ಬ ಕೌನ್ಸಿಲರು ಸಲಹೆಯನ್ನು ಕೂಡಾ ಬಹುದು.

ಪರಂತು ಒಂದು ಸಲಹೆಯ ಮೇಲೆ ಒಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳನ್ನು ಯಾವ ಕೌನ್ಸಿಲರೂ ಸೂಚಿಸಕೂಡದು ಆದರೆ ಅಂಥಾ ಸಲಹೆಯು ಬಜೆಟ್ ಯಾ ಜಮಾ ಖರ್ಚು ಅಂದಾಜನ್ನು ಅಥವಾ ಸಾಮಾನ್ಯ ನಿಬಂಧನೆಗಳನ್ನು ಮಂಜೂರ್ಮಾಡುವುದಕ್ಕೆ ಆಲೋಚನೆ ಹೇಳಿದ್ದ ಪಕ್ಷವಲ್ಲೂ, ಅಥವಾ ಅದು ನಾನಾ ಭಾಗಗಳಾಗಿ ಅನೇಕ ತಿದ್ದುಪಾಟುಗಳಿಗೆ ಅರ್ಹವಾದುದಾಗಿ ಇದ್ದರೂ, ಅಂಥಾ ಸಂದರ್ಭದಲ್ಲಿ ಅನೇಕ ತಿದ್ದುಪಾಟುಗಳನ್ನು ಸೂಚಿಸಬಹುದು

ಸಭಾಧ್ಯಕ್ಷರು ಸಲಹೆಯನ್ನು ವಿಾಟಿಂಗಿಗೆ ಓದಿ ಹೇಳಬೇಕು.

12 ಒಂದು ತಿದ್ದುಪಾಟನ್ನು ಸೂಚಿಸಿದವರು ಆ ತಿದ್ದುಪಾಟನ್ನು ಬಾಯಿಂದ ಹೇಳಬೇಕು ಅಥವಾ ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕೂತು ಕೊಳ್ಳುವುದಕ್ಕೆ ಮುಂಚೆಯೇ ಜವರಿಗೆ ಬರಹಮೂಲಕವಾಗಿ ಕೊಡತಕ್ಕದ್ದು. ಒಂದು ಸಲಹೆಯನ್ನು ಅಥವಾ ತಿದ್ದುಪಾಟನ್ನು ಸೂಚಿಸುವವರು ತಮ್ಮ ಸ್ಥಾನದಲ್ಲಿ ಕೂತನಂತರ, ಸಭಾಧ್ಯಕ್ಷರು ಸದರಿ ಸಲಹೆಯನ್ನು ಅಥವಾ ತಿದ್ದುಪಾಟನ್ನು ವಿಾಟಿಂಗಿಗೆ ಓದಿಹೇಳಿ ಆದನ್ನು ಯಾವ ಕೌನ್ಸಿಲರಾದರೂ ಅನುಮೋದಿಸುತ್ತಾರೆಯೇ ಎಂತಾ ಕೇಳಬೇಕು , ಸದರಿ ಸಲಹೆ ಅಥವಾ ತಿದ್ದುಪಾಟನ್ನು ಯಾರಾದರೂ ಅನುಮೋದಿಸುವ ಹೊರತು ಅದರಮೇಲೆ ಚರ್ಚೆ ಮಾಡುವಹಕ್ಕೆ ಸಭಾಧ್ಯಕ್ಷರು ಯಾರಿಗೂ ಅಪ್ಪಣೆ ಕೊಡಕೂಡದು ಆ ಸಲಹೆಯನ್ನು ಅಥವಾ ತಿದ್ದುಪಾಟನ್ನು ಯಾವ ಕೌನ್ಸಿಲರೂ ಅನುಮೋದಿಸದೆ ಇದ್ದರೆ, ಸಭಾಧ್ಯಕ್ಷರು ಸದರಿ ಸಲಹೆ ಅಥವಾ ತಿದ್ದುಪಾಟು ನಪ್ಪಾವಾಯಿತೆಂದು ಎಂದರೆ ಅದನ್ನು ಮಂಜೂರ್ಮಾಡುವುದಿಲ್ಲವೆಂದು ಹೇಳತಕ್ಕದ್ದು

ಉಪನ್ಯಾಸವನ್ನು ಓದತಕ್ಕದ್ದಲ್ಲ.

13 ಕೌನ್ಸಿಲರು ತಮ್ಮ ಉಪನ್ಯಾಸವನ್ನು ಓದಕೂಡದು , ಆದರೆ ಜ್ಞಾಪಕಾರ್ಥವಾಗಿ ಬರೆದುಕೊಂಡಿದ್ದ ಟಿಪ್ಪಣಿಯ ನೋಟಿನನ್ನು ನೋಡಬಹುದು ಮತ್ತು ಸಭಾಧ್ಯಕ್ಷರ ಅನುಮತಿಯ ಮೇಲೆ ತಮ್ಮ ಭಾಷಣಕ್ಕೆ ಸಂ

ಬಂಧಪಟ್ಟ ಮಟ್ಟಿಗೆ ಪುಸ್ತಕಗಳಲ್ಲಿ ಅಥವಾ ದಸ್ತ್ಯೆವೇಜುಗಳಲ್ಲಿ ಇರುವ ವಾಕ್ಯಗಳನ್ನು ಓದಬಹುದು.

ಮುಂದಾಗಿ ತಿಳಿಸಲ್ಪಟ್ಟ ಸಲಹೆಯ ವಿಷಯದಲ್ಲಿ ಮೊದಲು ಸಲಹೆ ಕೊಟ್ಟವರು ಗೈರುಹಾಜರಾದರೆ ಅಥವಾ ಅವರಿಗೆ ಇಷ್ಟವಿಲ್ಲದ ಇದ್ದರೆ ಮತ್ತೊಬ್ಬ ಕೌನ್ಸಿಲರಾದರೂ ಅಂಥಾ ಸಲಹೆಯನ್ನು ಪ್ರಸ್ತಾಪಿಸಬಹುದು

14. ಒಂದು ಸಲಹೆಯನ್ನು ಪ್ರಸ್ತಾಪಿಸುವುದಾಗಿ ಒಬ್ಬ ಕೌನ್ಸಿಲರು ಮುಂಚಿತವಾಗಿ ನೋಟೀಸು ಕೊಟ್ಟು ಇದ್ದು ನಂತರ ಅವರು ಮಿಾಟಂಗಿನಲ್ಲಿ ಹಾಜರಿಲ್ಲದೆ ಹೋದರೂ ಅಥವಾ ಮಿಾಟಂಗು ಸೇರುವುದಕ್ಕೆ ಮುಂಚೆಯೆ ಅವರಿಗೆ ಕೌನ್ಸಿಲರ್ ಕೆಲಸ ತಪ್ಪಿದರೂ ಅಥವಾ ತಾವು ತಿಳಿಸಿದ್ದ ಸಲಹೆಯನ್ನು ಪ್ರಸ್ತಾಪಿಸುವುದಕ್ಕೆ ಮನಸ್ಸಿಲ್ಲದೆ ಹೋದರೂ, ಮಿಾಟಂಗಿನಲ್ಲಿ ಹಾಜರಿರುವ ಯಾವ ಕೌನ್ಸಿಲರಾದರೂ,ಸರಿಯೇ ಸಭಾಧ್ಯಕ್ಷರ ಅನುಮತಿಯನ್ನು ಪಡೆದು ನೋಟೀಸು ಮೂಲಕ ತಿಳಿಸಲ್ಪಟ್ಟ ಸದರಿ ಸಲಹೆಯನ್ನು ಪ್ರಸ್ತಾಪಿಸಬಹುದು.

ಮೊದಲು ಮಾಡಲ್ಪಟ್ಟ ಸಲಹೆಗಳಲ್ಲಿರುವ ಕೆಲವು ಪದಗಳನ್ನು ಬಿಟ್ಟು ಬಿಡುವುದಕ್ಕಾಗಿ ತಿದ್ದುಪಾಟುಗಳು ಸೂಚಿಸಲ್ಪಟ್ಟಿದ್ದಲ್ಲಿ ಅಂಥಾ ತಿದ್ದುಪಾಟುಗಳು ಸ್ಪಷ್ಟವಾಗಿಯೂ ಸಂಗತವಾಗಿಯೂ ಇರಬೇಕು. ಹಿಂಪಡೆಯಲ್ಪಟ್ಟ, ಸಲಹೆಗಳ ನಿಷೇಧವಾಚಕಗಳಾಗಿ ಮಾತ್ರ ಇರಕೂಡದು

15. ಒಂದು ತಿದ್ದುಪಾಟು ಸಾಧಾರಣವಾಗಿ ಒಂದು ಸಲಹೆಯ ರೂಪವಾಗಿದ್ದು ಮೊದಲು ಹೇಳಲ್ಪಟ್ಟ ಸಲಹೆಯಲ್ಲಿ ಕೆಲವು ಪದಗಳನ್ನು ಬಿಟ್ಟುಬಿಡತಕ್ಕದೆಂದಾಗಲಿ ಕೆಲವು ಪದಗಳನ್ನು ಅದರಲ್ಲಿ ಸೇರಿಸತಕ್ಕದೆಂದಾಗಲಿ ಅಥವಾ ಹೀಗೆ ಕೆಲವು ಪದಗಳನ್ನು ಅದಕ್ಕೆ ಸೇರಿಸಬೇಕೆಂದಾಗಲಿ ತಿಳಿಸತಕ್ಕದ್ದು.

ಪ್ರತಿ ಒಂದು ತಿದ್ದುಪಾಟು ಯಾವ ಸಲಹೆಯನ್ನು ತಿದ್ದುವುದಕ್ಕಾಗಿ ಸಲಹೆ ಹೇಳಲ್ಪಡುತ್ತದೆಯೋ ಅಂಥಾ ಸಲಹೆಗೆ ಸಂಬಂಧಪಟ್ಟದ್ದಾಗಿಯೂ ಮತ್ತು ಅದರೊಡನೆ ಓದಿದರೆ ಚೆನ್ನಾಗಿ ತಿಳಿಯುವಂಥಾ ವಾಕ್ಯರಚನೆಯುಳ್ಳದ್ದಾಗಿಯೂ ಇರಬೇಕು. ಸಲಹೆಯನ್ನು ನಿಷೇಧಿಸತಕ್ಕ ತರಹೆಯಲ್ಲಿ ತರಲ್ಪಡುವ ತಿದ್ದುಪಾಟನ್ನು ಅಂಗೀಕರಿಸತಕ್ಕದ್ದಲ್ಲ

ತಿದ್ದುಪಾಟುಗಳನ್ನು ಮುಂಚಿತವಾಗಿ ಪ್ರೆಸಿಡೆಂಟರಿಗೆ ಕಳುಹಿಸಬಹುದು.

16. ಒಂದು ಸಲಹೆಗೆ ತಿದ್ದುಪಾಟನ್ನು ಸೂಚಿಸಬೇಕೆಂದಿರುವ ಕೌನ್ಸಿಲರು ಅಂಥಾ ತಿದ್ದುಪಾಟನ್ನು ಪ್ರೆಸಿಡೆಂಟರಿಗಾಗಲಿ ಅಥವಾ ಸಭಾಧ್ಯಕ್ಷರಿಗಾಗಲಿ ಬರಹಮೂಲಕವಾಗಿ ಮೊದಲೇ ಕಳುಹಿಸಬಹುದು ಅಥವಾ ಖುದ್ದಾಗಿ ಕೊಡಬಹುದು.

ಒಂದಕ್ಕಿಂತಲೂ ಹೆಚ್ಚಾದ ತಿದ್ದುಪಾಟುಗಳು ಬಂದಲ್ಲಿ ಅವುಗಳನ್ನು ಆಲೋಚಿಸತಕ್ಕ ಕ್ರಮ.

17. ಒಂದು ಸಲಹೆಯು ಪ್ರಸ್ತಾಪಿಸಲ್ಪಟ್ಟು ಅನುಮೋದಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರಿಗಾಗಲಿ ಅಥವಾ ಸಭಾಧ್ಯಕ್ಷರಿಗಾಗಲಿ ಹೇಳಲ್ಪಟ್ಟ ಯಾ ಕೊಡಲ್ಪಟ್ಟ ಸದರಿ ಸಲಹೆಯ ತಿದ್ದುಪಾಟುಗಳು ಅಂಗೀಕರಿಸಲ್ಪಟ್ಟಲ್ಲಿ ಅವುಗಳು ತಿದ್ದುಪಾಟುದ ಸಲಹೆಯಲ್ಲಿ ಯಾವ ಕ್ರಮವನ್ನು ಅನುಸರಿಸುತ್ತವೆಯೋ ಅದೇ ಕ್ರಮದಲ್ಲಿ ಏರ್ಪಡಿಸಲ್ಪಡತಕ್ಕದ್ದು; ಅಲ್ಲದೆ ಇನ್ನೂ ಕೆಲವು ತಿದ್ದುಪಾಟುಗಳು ಸಭಾಧ್ಯಕ್ಷರಿಗೆ ಹೇಳಲ್ಪಟ್ಟಲ್ಲಿ ಅಥವಾ ಕೊಡಲ್ಪಟ್ಟಲ್ಲಿ ಅವುಗಳನ್ನು ಅದೇ ಕ್ರಮದಲ್ಲಿ ಸೇರಿಸಿಕೊಳ್ಳತಕ್ಕದ್ದು; ಮತ್ತು ಸಭಾಧ್ಯಕ್ಷರು ತಿದ್ದುಪಾಟುಗಳನ್ನು ಸೂಚಿಸುವವರಿಗೆ ಅದೇ ಕ್ರಮವನ್ನನುಸರಿಸಿ ತಮ್ಮ ತಮ್ಮ ತಿದ್ದುಪಾಟುಗಳನ್ನು ಪ್ರಸ್ತಾಪಿಸಬಹುದೆಂದು ಹೇಳತಕ್ಕದ್ದು.

ಒಂದು ತಿದ್ದುಪಾಟಿನ ವಿಷಯವು ಇತ್ಯರ್ಥವಾದಮೇಲೆಯೇ ಮತ್ತೊಂದನ್ನು ಆಲೋಚನೆಗೆ ತೆಗೆದುಕೊಳ್ಳತಕ್ಕದ್ದು.

18 ಒಂದು ತಿದ್ದುಪಾಟಿನ ವಿಷಯವು ಇತ್ಯರ್ಥವಾದಮೇಲೆಯೇ ಮತ್ತೊಂದನ್ನು ಆಲೋಚನೆಗೆ ತೆಗೆದುಕೊಳ್ಳಬೇಕು ಆದರೆ ಯಾವುದಾದರೂ ಒಂದು ತಿದ್ದುಪಾಟು ಸಲಹೆ ಕೊಡಲ್ಪಟ್ಟು ಅನುಮೋದಿಸಲ್ಪಟ್ಟ ನಂತರ ಯಾವ ಕೌನ್ಸಿಲರಾದರೂ ಅಂಥಾ ತಿದ್ದುಪಾಟಿನಲ್ಲಿ ಕೆಲವು ಪದಗಳನ್ನು ಬಿಟ್ಟುಬಿಡಬೇಕೆಂದಾಗಲಿ ಸೇರಿಸಬೇಕೆಂದಾಗಲಿ ಸಲಹೆ ಕೊಡಬಹುದು. ಈರೀತಿ ಹೇಳಿದ ಮೇಲೆ ಸಭಾಧ್ಯಕ್ಷರು ಸದರಿ ಸಲಹೆಯನ್ನು ಅನುಮೋದಿಸತಕ್ಕವರು ಯಾರಾದರೂ ಇರುತ್ತಾರೆಯೇ ಎಂದು ಕೇಳಿ, ಹಾಗೆ ಯಾವ ಕೌನ್ಸಿಲರಾದರೂ ಅದನ್ನು ಅನುಮೋದಿಸಿದರೆ, ಅಂಥಾ ತಿದ್ದುಪಾಟಿನಲ್ಲಿ ಬದಲಾವಣೆಯಾಗಬೇಕೆಂಬ ಸಲಹೆಯು ಮಿಾಟಂಗಿನಲ್ಲಿ, ಆಗ ಚರ್ಚಿಸಲ್ಪಡತಕ್ಕ ವಿಷಯವಾಗುತ್ತದೆ